**ಸಾಗರದ ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ.**

## ಅಪರಾಧ ಮೊಕದ್ದಮೆ ಸಂಖ್ಯೆ: ನಂ:2427/2025

ಪಿರ್ಯಾದುದಾರರು:

ರಾಜೇಶ ಜಿ.ಎಸ್. ಬಿನ್ ಶಶಿ,
ಸುಮಾರು 28 ವರ್ಷ,
ಬಿ.ಕೆ. ರಸ್ತೆ, ಗಾಂಧಿನಗರ, ಸಾಗರ ಟೌನ್,
ಶಿವಮೊಗ್ಗ ಜಿಲ್ಲೆ.

-ವಿರುದ್ಧ-

ಆರೋಪಿ:

ರೇಣುಕಾ ಎನ್. ಕೋಂ ನಾಗರಾಜ್ ಎಸ್.,
ಸುಮಾರು 47 ವರ್ಷ,
ಆನಂದಸುಧಾ ನಿಲಯ, ಜನ್ನತ್ ನಗರ,
ಮುಖ್ಯ ರಸ್ತೆ, ಸಾಗರ ಟೌನ್,
ಶಿವಮೊಗ್ಗ ಜಿಲ್ಲೆ.

## ಆಪಾದನೆ

ನೀವು ಪಿರ್ಯಾದುದಾರರಿಂದ ತಮ್ಮ ಆರ್ಥಿಕ ಅಡಚಣೆಯನ್ನು ನಿವಾರಿಸುವ ಸಲುವಾಗಿ ದಿನಾಂಕ:07.01.2023 ರಂದು ರೂ.2,50,000-00(ಎರಡು ಲಕ್ಷದ ಐವತ್ತು ಸಾವಿರ)ಗಳನ್ನು ಕೈಗಡ ಸಾಲವಾಗಿ ಪಡೆದು, ಸದರಿ ಸಾಲವನ್ನು ಎರಡು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿ ಹಣ ಪಡೆದಿದ್ದು, ಆದರೆ ಆರೋಪಿಯಾದ ನೀವು ಸದರಿ ಹಣವನ್ನು ಸಕಾಲದಲ್ಲಿ ಪಿರ್ಯಾದುದಾರರಿಗೆ ಹಿಂದಿರುಗಿಸದೇ ಇದ್ದುದರಿಂದ, ಪಿರ್ಯಾದಿದಾರರು ಆರೋಪಿಯನ್ನು ಮರುಪಾವತಿಸುವಂತೆ ಪದೇ ಪದೇ ಕೇಳಿದಾಗ ಆರೋಪಿಯಾದ ನೀವು ದಿನಾಂಕ:02.03.2023 ರಂದು ತಾವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಾಗರ ಶಾಖೆಗೆ ಸೇರಿದ ಚೆಕ್ ಸಂಖ್ಯೆ.745629 ರ ಮೇಲೆ ರೂ.2,50,000/-(ಎರಡು ಲಕ್ಷದ ಐವತ್ತು ಸಾವಿರ)ಗಳನ್ನು ದಿನಾಂಕ:02.03.2023 ಎಂದು ಬರೆದು ನಮೂದಿಸಿ ಸಹಿ ಮಾಡಿ ನಗದೀಕರಿಸಿಕೊಳ್ಳುವಂತೆ ತಿಳಿಸಿ ಪಿರ್ಯಾದುದಾರರಿಗೆ ನೀಡಿದ್ದು, ನಂತರ ಆರೋಪಿಯಿಂದ ಪಡೆದ ಸದರಿ ಚೆಕ್ಕನ್ನು ಪಿರ್ಯಾದಿಯು ನಗದೀಕರಣಕ್ಕಾಗಿ ತಾವು ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಸಾಗರ ಶಾಖೆಗೆ ದಿ:02.03.2023

ರಂದು ನಗದೀಕರಿಸಲು ಸಲ್ಲಿಸಿದಾಗ ಸದರಿ ಚೆಕ್ ಆಂಗ್ಲ ಭಾಷೆಯಲ್ಲಿ (Exceeds Arrangement) ಎಂಬ ಷರಾದೊಂದಿಗೆ ದಿಃ03.03.2023 ರಂದು ಚೆಕ್ ವಾಪಸ್ಸು ನೀಡಿರುತ್ತಾರೆ. ನಂತರ ಅವರು ಈ ಬಗ್ಗೆ ಅವರು ತಮ್ಮ ವಕೀಲರ ಮೂಲಕ ನೊಂದಣಿ ಅಂಚೆ ಮೂಲಕ ದಿನಾಂಕಃ06.04.2023 ರಂದು ನೋಟೀಸನ್ನು ನೀಡಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕಃ10.04.2023 ರಂದು ಖುದ್ದು ಜಾರಿಯಾಗಿರುತ್ತದೆ. ಆದರೂ ಸಹ, ನೀವು ಸದ್ರಿ ಚೆಕ್‌ನಲ್ಲಿ ಹೇಳಿದ ಹಣವನ್ನು ಫಿರ್ಯಾದುದಾರರಿಗೆ ಮರುಪಾವತಿ ಮಾಡದೆ, ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯಿದೆ ಸೆಕ್ಷನ್ 138ರ ಪ್ರಕಾರ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಪ್ರಶ್ನೆ. 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಅಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?

ಉತ್ತರಃ-

ಪ್ರಶ್ನೆ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮದೇನಾದರೂ ಪ್ರತಿರಕ್ಷೆ ಇದೆಯಾ?

ಉತ್ತರಃ-

(ದಿನಾಂಕಃ14.10.2025 ರಂದು ಆರೋಪಿಯಿಂದ ಮೇಲ್ಕಂಡ ಅಪಾದನೆ ನೀಡಲ್ಪಟ್ಟಿರುತ್ತದೆ ಎಂದು ದೃಡೀಕರಿಸಿದೆ).

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ